ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1440(1704)

2) ಸದಸ್ಯರ ಹೆಸರು : ಶ್ರೀ ಎಂ.ಎ. ಗೋಪಾಲಸ್ವಾಮಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 23-03-2020

4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಕ್ರ ಸಂ	ಪ್ರಶ್ನೆ	ಉತ್ತರ
ಅ)	ಹಾಸನ ಜಿಲ್ಲೆಯಲ್ಲಿ ಆನೆಗಳ ಹಾವಳಿ ಹೆಚ್ಚಾಗಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದಲ್ಲಿ, ಈ ಕುರಿತು ಸರ್ಕಾರ ಕೈಗೊಂಡ ಕ್ರಮಗಳೇನು; (ಸಂಪೂರ್ಣ ವಿವರ ನೀಡುವುದು)	ಹೌದು. ಹಾಸನ ಜಿಲ್ಲೆಯಲ್ಲಿ ಆನೆ ಹಾವಳಿ ಉಪಶಮನಕ್ಕಾಗಿ ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ. 1. ಕಾಡಾನೆಗಳು ಅರಣ್ಯ ಪ್ರದೇಶದಿಂದ ಪಕ್ಕದ ಕೃಷಿ ಹಾಗೂ ಸಾರ್ವಜನಿಕರ ಸ್ಥಳಗಳಲ್ಲಿ ದಾಳಿ ಮಾಡುವುದನ್ನು ತಡೆಗಟ್ಟುವ ಸಲುವಾಗಿ ಸೂಕ್ಷ್ಮ ಪ್ರದೇಶಗಳ ಅರಣ್ಯದ ಅಂಚಿನಲ್ಲಿ 2006-07ನೇ ಸಾಲಿನಲ್ಲಿ ಯಸಳೂರು ವಲಯದಲ್ಲಿ 3.00 ಕಿಮೀ ಮತ್ತು ಅರಕಲಗೂಡು ವಲಯದಲ್ಲಿ 6.00 ಕಿಮೀ ಮತ್ತು 2017-18ನೇ ಸಾಲಿನಲ್ಲಿ 2.00 ಕಿ.ಮೀ ಹಾಗೂ ಆಲೂರು ವಲಯದಲ್ಲಿ 4.00 ಕಿ.ಮೀ, ಒಟ್ಟು 15.00 ಕಿಮೀ ಕಾಡಾನೆ ನಿರೋಧಕ ಕಂದಕಗಳನ್ನು ಮತ್ತು 2010-11ನೇ ಸಾಲಿನಲ್ಲಿ 9.50 ಕಿಮೀ ಸೌರಶಕ್ತಿ ತಂತಿಬೇಲಿಯನ್ನು ನಿರ್ಮಾಣ ಮಾಡಿ ಕಾಡಾನೆ ಹಾವಳಿಯನ್ನು ನಿಯಂತ್ರಿಸಲಾಗಿದೆ. 2. ಕಾಡಾನೆಗಳು ಪದೇ ಪದೇ ಕೃಷಿ ಜಮೀನುಗಳಿಗೆ ದಾಳಿ ಮಾಡುವ ಸೂಕ್ಷ್ಮ ಸ್ಥಳಗಳನ್ನು ಗುರುತಿಸಿ ಹಾವಳಿ ನಡೆಸುವ ಕಾಡಾನೆಗಳನ್ನು ಪುನಃ ಕಾಡಿಗೆ ಓಡಿಸುವ ಸಲುವಾಗಿ ಸಕಲೇಶಪುರ, ಅರಕಲಗೂಡು ಮತ್ತು ಆಲೂರು ತಾಲ್ಲೂಕುಗಳಲ್ಲಿ ಒಟ್ಟು 06 ಶಾಶ್ವತ ಕಾಡಾನೆ ಹಿಮ್ಮೆಟ್ಟಿಸುವ ಕ್ಯಾಂಪುಗಳನ್ನು ಸ್ಥಾಪಿಸಲಾಗಿದೆ. ಈ ವಿಭಾಗದಲ್ಲಿ 21 ಕಾಡಾನೆಗಳನ್ನು ಹಿಮ್ಮೆಟ್ಟಿಸುವ ತಂಡಗಳು ಹಾಗೂ 05 ಕ್ಷಿಪ್ರ ಕಾರ್ಯಪಡೆಗಳನ್ನು ರಚಿಸಿದ್ದು, ಪ್ರತಿಯೊಂದು ಕ್ಯಾಂಪಿನಲ್ಲೂ ಸ್ಥಳೀಯರ ಜೊತೆಗೆ ನಾಲ್ಕು ಮಂದಿ ನುರಿತ ಸಿಬ್ಬಂದಿಗಳನ್ನು ನಿಯೋಜಿಸಿ ವಾಹನಗಳ ಸೌಲಭ್ಯಗಳನ್ನು ಒದಗಿಸಲಾಗಿದೆ. 3. ಅಲ್ಲದೇ ಅವರುಗಳಿಗೆ ಪಟಾಕಿ ಇನ್ನಿತರ ಸಾಮಗ್ರಿಗಳನ್ನು ನೀಡಿ ಹಾವಳಿ ನಡೆಸುವ ಕಾಡಾನೆಗಳನ್ನು ಅರಣ್ಯ ಪ್ರದೇಶಗಳಿಗೆ ಹಿಮ್ಮೆಟ್ಟಿಸಲು ಕ್ರಮ ಕೈಗೊಳ್ಳಲಾಗುತ್ತಿದೆ ಮತ್ತು ಧ್ವನಿವರ್ಧಕ, ಭಿತ್ತಿಪತ್ರಗಳ ಮೂಲಕ ಪ್ರಚಾರ ಮಾಡಿ ಕಾಡಾನೆಗಳಿಂದಾಗುವ ಹಾವಳಿ ಬಗ್ಗೆ ಮುನ್ನೆಚ್ಚರಿಕೆ ವಹಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ.

4. ಆನೆ ನಿರೋಧಕ ಕಂದಕಗಳನ್ನು ಮತ್ತು ಸೌರ ಶಕ್ತಿ ಬೇಲಿಗಳನ್ನು ನಿರ್ಮಾಣ ಮಾಡಲಾಗಿದೆ.

5. ದಿನಾಂಕ 15.11.2013ರ ಆದೇಶದಲ್ಲಿ 25 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲು ನೀಡಿದ ಅನುಮತಿಯಂತೆ ಸದರಿ ಕಾಡಾನೆಗಳನ್ನು ಹಿಡಿದು ವಿವಿಧ ಅಭಯಾರಣ್ಯಗಳಿಗೆ ಸ್ಥಳಾಂತರಿಸಲಾಗಿದೆ. ಅದಲ್ಲದೇ, 1987–88ನೇ ಸಾಲಿನಿಂದ ಇಲ್ಲಿಯವರೆಗೆ ಒಟ್ಟು 70 ಕಾಡಾನೆಗಳನ್ನು ಸೆರೆಹಿಡಿದು ಸ್ಥಳಾಂತರಿಸಲಾಗಿದೆ.

6. ಧ್ವನಿವರ್ಧಕ ಮತ್ತು ಭಿತ್ತಿ ಪತ್ರಗಳ ಮೂಲಕ ಕಾಡಾನೆಗಳಿಂದಾಗುವ ಹಾವಳಿ ಬಗ್ಗೆ ಪ್ರಚಾರ ಮಾಡಿ ಮುನ್ನೆಚ್ಚರಿಕೆ ವಹಿಸಲು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲಾಗುತ್ತಿದೆ. ಬೆಳಗ್ಗೆ ಮತ್ತು ಸಾಯಂಕಾಲ ಕಾಡಾನೆಗಳ ಹಾವಳಿಗಳ ಬಗ್ಗೆ ನಿಗಾವಹಿಸಬೇಕಾದ ಕ್ರಮಗಳ ಕುರಿತು ಸಾರ್ವಜನಿಕರಿಗೆ, ಶಾಲಾ ಮಕ್ಕಳಿಗೆ, ಎಸ್‌ಎಂಎಸ್ ಮುಖಾಂತರ ಎಚ್ಚರಿಕೆ ನೀಡಲಾಗುತ್ತಿದೆ.

7. ಕಾಡಾನೆ ಗುಂಪುಗಳಲ್ಲಿ ಇದ್ದ ವಯಸ್ಕ ಹೆಣ್ಣಾನೆಯನ್ನು ಗುರುತಿಸಿ ಅದಕ್ಕೆ ರೇಡಿಯೋ ಕಾಲರ್ ಅಳವಡಿಸಿ, ಆನೆಗಳ ಚಲನ–ವಲನಗಳ ಬಗ್ಗೆ ಎಸ್.ಎಂ.ಎಸ್ ಹಾಗೂ ವಾಟ್ಸ್ ಅಪ್ ಮೂಲಕ ಜನರಿಗೆ ಮಾಹಿತಿಯನ್ನು ನೀಡಿ ಮಾನವ ಪ್ರಾಣಹಾನಿ ಹಾಗೂ ಮಾನವ ಗಾಯ ತಪ್ಪಿಸಲು ಕ್ರಮ ವಹಿಸಲಾಗುತ್ತಿದೆ.

8. ಕಾಡಾನೆಗಳಿಗೆ ಆಹಾರ ಒದಗಿಸುವ ಸಲುವಾಗಿ 2018–19ನೇ ಸಾಲಿನಲ್ಲಿ 15.00 ಹೆಕ್ಟೇರು ಹಾಗೂ 2019–20ನೇ ಸಾಲಿನಲ್ಲಿ 70.00 ಹೆಕ್ಟೇರು, ಒಟ್ಟು 85.00 ಹೆಕ್ಟೇರು ಬೊಂಬು ನೆಡುತೋಪು ಬೆಳೆಸಲಾಗಿದೆ.

9. ಕಾಡಂಚಿನ ಗ್ರಾಮಗಳ ಶಾಲಾ ಮಕ್ಕಳನ್ನು ಪ್ರತಿ ದಿನ ನಿವಾಸದಿಂದ ಶಾಲೆಯವರೆಗೆ ಹಾಗೂ ಶಾಲೆಯಿಂದ ನಿವಾಸದವರೆಗೆ ಕರೆತರುವ ಮತ್ತು ಬಿಟ್ಟುಬರುವ ಕಾರ್ಯವನ್ನು ನಿರ್ವಹಿಸಲಾಗುತ್ತಿದೆ.

10. ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಜಿಲ್ಲೆ, ಹಾಸನ, ಕಾಫೀ ಪ್ಲಾಂಟರ್ಸ್, ಪರಿಸರ ಪ್ರೇಮಿಗಳು, ರೈತರು ಮತ್ತು ಸಾರ್ವಜನಿಕರೊಡನೆ ಪದೇ ಪದೇ ಸಭೆಗಳನ್ನು ನಡೆಸಿ ಕಾಡಾನೆಗಳ ಹಾವಳಿಯಿಂದ ಮುನ್ನೆಚ್ಚರಿಕೆ ವಹಿಸುವ ಕ್ರಮಗಳ ಕುರಿತು ಮಾಹಿತಿ ನೀಡುವುದು ಮತ್ತು ಅವರಿಂದ ಸಲಹೆ ಸೂಚನೆಗಳನ್ನು ಪಡೆಯಲಾಗುತ್ತಿದೆ.

11. ಕಾಫಿ ತೋಟದಲ್ಲಿ ಕೆಲಸ ಮಾಡುವ ಕಾರ್ಮಿಕರಿಗೆ ಯಾವ ಯಾವ ಸಮಯದಲ್ಲಿ ಕಾಡಾನೆಗಳು ಸಂಚರಿಸುವ ಪ್ರದೇಶಗಳಲ್ಲಿ ಚಲಿಸಬೇಕು, ಯಾವ ಯಾವ ಸಮಯದಲ್ಲಿ ಓಡಾಡಬಾರದು ಎಂಬ ಬಗ್ಗೆ ಮಾಹಿತಿ ನೀಡಲಾಗುತ್ತಿದೆ.

		12. ಕಾಡಾನೆ ಹಾವಳಿಯನ್ನು ಶಾಶ್ವತವಾಗಿ ತಡೆಗಟ್ಟುವ ನಿಟ್ಟಿನಲ್ಲಿ ಮುಂದಿನ ಮಾರ್ಗೋಪಾಯಗಳನ್ನು ರೂಪಿಸಲು ಜಿಲ್ಲಾಧಿಕಾರಿಗಳು, ಹಾಸನ ಇವರು ಶಾಸಕರು, ಸಂಘಸಂಸ್ಥೆಗಳು, ಜನ ಪ್ರತಿನಿಧಿಗಳು ಹಾಗೂ ಅರಣ್ಯ ಇಲಾಖೆ, ಕಂದಾಯ ಇಲಾಖೆ, ಪೊಲೀಸ್ ಇಲಾಖೆ, ಕೃಷಿ ಇಲಾಖೆ, ತೋಟಗಾರಿಕಾ ಇಲಾಖಾ ಅಧಿಕಾರಿಗಳು ಮತ್ತು ಮಾಧ್ಯಮದ ಪದಾಧಿಕಾರಿಗಳನ್ನು ಒಳಗೊಂಡಂತೆ ಕೋರ್ ಕಮಿಟಿಯನ್ನು ರಚಿಸಲಾಗಿದೆ. 13. ಶಾಶ್ವತ ಪರಿಹಾರ ಕಂಡುಹಿಡಿಯಲು ಭಾರತ ಸರ್ಕಾರದಿಂದ ಆನೆ ಟಾಸ್ಕ್ ಫೋರ್ಸ್ ಸಮಿತಿ ರಚನೆಯಾಗಿದ್ದು, ಸದರಿ ಸಮಿತಿಯ ವತಿಯಿಂದ ಪ್ರವಾಸ ಮಾಡಿ ಸಾರ್ವಜನಿಕರು, ಕಾಫಿ ಬೆಳೆಗಾರರು, ಜನಪ್ರತಿನಿಧಿಗಳು ಮತ್ತು ಗ್ರಾಮಸ್ತರಿಂದ ಅಹವಾಲು/ಅಭಿಪ್ರಾಯಗಳನ್ನು ಪಡೆಯಲಾಗುತ್ತಿದೆ. 14. ಶಾಶ್ವತ ಪರಿಹಾರಕ್ಕಾಗಿ ಹಾಸನ ಜಿಲ್ಲೆಯ ಆಲೂರು ವಲಯದ ದೊಡ್ಡಬೆಟ್ಟ ಮೀಸಲು ಅರಣ್ಯ ಪ್ರದೇಶದಲ್ಲಿ ಒಟ್ಟು 18.00 ಕಿಮೀ ರೈಲ್ವೇ ಬ್ಯಾರಿಕೇಡ್‌ಗಳನ್ನು ಅಳವಡಿಸಲು ಪ್ರಸ್ತಾವನೆ ಇದ್ದು, 2019-20ನೇ ಸಾಲಿನಲ್ಲಿ 4.24 ಕಿಮೀ ಅಳವಡಿಸಲು ವಾರ್ಷಿಕ ಕ್ರಿಯಾ ಯೋಜನೆ ಮಂಜೂರಾಗಿದ್ದು, ಮುಂದಿನ ಪ್ರಕ್ರಿಯೆಗಳು ಪ್ರಗತಿಯಲ್ಲಿದೆ. 15. ಆನೆ ಕಾರಿಡಾರ್ ನಿರ್ಮಿಸಲು 15,008.61 ಎಕರೆ ಅರಣ್ಯೇತರ ಪ್ರದೇಶವನ್ನು ಅರಣ್ಯ ಇಲಾಖೆಗೆ ವರ್ಗಾಯಿಸಲು ಮಾನ್ಯ ಜಿಲ್ಲಾಧಿಕಾರಿಗಳು, ಹಾಸನ ಇವರಿಗೆ ಪ್ರಸ್ತಾವನೆ ಸಲ್ಲಿಸಲಾಗಿದೆ. 16. ಹಾಸನ ವಿಭಾಗದಲ್ಲಿ 2007-08ನೇ ಸಾಲಿನಿಂದ ದಿನಾಂಕ: 15-03-2020 ರವರೆಗೆ ಕಾಡಾನೆಗಳ ಹಾವಳಿಯಿಂದ ನಷ್ಟವಾಗಿರುವ 31,364 ಕುಟುಂಬಗಳಿಗೆ ರೂ. 13,07,15,530/- ಗಳನ್ನು ಪರಿಹಾರ ನೀಡಲಾಗಿದೆ. 17. ಇತ್ತೀಚಿನ ದಿನಗಳಲ್ಲಿ ವನ್ಯಪ್ರಾಣಿಗಳ ಹಾವಳಿಯಿಂದ ಉಂಟಾಗುವ ಹಾನಿ ಪ್ರಕರಣಗಳಿಗೆ ಇ-ತತ್ರಾಂಶದ ಮೂಲಕ ಅರ್ಜಿಗಳನ್ನು ಸ್ವೀಕರಿಸಲಾಗುತ್ತಿದ್ದು, ನಿಯಮಾನುಸಾರ ಪರಿಶೀಲಿಸಿ ಆಧ್ಯತೆ ಮೇರೆಗೆ ನೇರವಾಗಿ ಸಂತ್ರಸ್ಥರ ಖಾತೆಗೆ ಪಾವತಿಸುವ ಪ್ರಕ್ರಿಯೆಯನ್ನು **ಇ-ಪರಿಹಾರ ತಂತ್ರಾಂಶದ** ಮೂಲಕ ನಿರ್ವಹಿಸಲಾಗುತ್ತಿದೆ. 18. ಎಸ್.ಎಂ.ಎಸ್ / ವ್ಯಾಟ್ಸ್‌ಅಪ್ ಗ್ರೂಪ್ ಮಾಡಿಕೊಂಡು ಆನೆಯ ಚಲನ-ವಲನಗಳ ಬಗ್ಗೆ ಮಾಹಿತಿಯನ್ನು ವಿನಿಮಯ ಮಾಡಕೊಳ್ಳಲಾಗುತ್ತಿದೆ.

ಆ)	ಕಳೆದ 3 ವರ್ಷಗಳಲ್ಲಿ ಹಾಸನ ಜಿಲ್ಲೆಯಲ್ಲಿ ಆನೆ ದಾಳಿಗೊಳಗಾದ ಕುಟುಂಬಗಳಿಗೆ ಸರ್ಕಾರ ನೀಡಿರುವ ಪರಿಹಾರವೆಷ್ಟು; ಈವರೆಗೂ ಎಷ್ಟು ಕುಟುಂಬಗಳಿಗೆ ಪರಿಹಾರ ನೀಡಲಾಗಿದೆ; (ಫಲಾನುಭವಿಯ ಹೆಸರು ಮತ್ತು ಗ್ರಾಮದ ವಿವರ ನೀಡುವುದು)	ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಆನೆ ದಾಳಿಯಿಂದ ಉಂಟಾದ ಬೆಳೆಹಾನಿ ಪ್ರಕರಣಗಳಗೆ ಪಾವತಿಸಿದ ಪರಿಹಾರ ಹಾಗೂ ಮಾನವ ಗಾಯ ಮತ್ತು ಮಾನವ ಪ್ರಾಣ ಹಾನಿ ಪ್ರಕರಣಗಳಲ್ಲಿ ನಿಯಮಾನುಸಾರ ಪರಿಶೀಲಿಸಿ, ಗಾಯಗೊಂಡ ವ್ಯಕ್ತಿಗೆ ಮತ್ತು ಮೃತರ ಕುಟಂಬದ ವಾರಸುದಾರರಿಗೆ ಪಾವತಿಸಿರುವ ದಯಾತ್ಮಕ ಧನದ ವಿವರವನ್ನು ಪ್ರತ್ಯೇಕವಾಗಿ **ಅನುಬಂಧ-1**ರಲ್ಲಿ ಒದಗಿಸಲಾಗಿದೆ. ಕಾಡಾನೆಗಳ ದಾಳಿಯಿಂದ ಉಂಟಾದ ಮಾನವಗಾಯ ಮತ್ತು ಮಾನವಪ್ರಾಣ ಹಾನಿ ಪ್ರಕರಣಗಳಲ್ಲಿ ಪಾವತಿಸಿದ ದಯಾತ್ಮಕ ಧನದ ಫಲಾನುಭವಿಗಳ ಹೆಸರು ಮತ್ತು ಗ್ರಾಮದ ವಿವರಗಳನ್ನು **ಅನುಬಂಧ-2** ಮತ್ತು **ಅನುಬಂಧ-3**ರಲ್ಲಿ ಒದಗಿಸಲಾಗಿದೆ.
ಇ)	ಪರಿಹಾರ ನೀಡದೇ ಬಾಕಿ ಉಳಿದಿರುವ ಕುಟುಂಬಗಳೆಷ್ಟು; ಪರಿಹಾರ ನೀಡುವಲ್ಲಿ ವಿಳಂಬವಾಗುತ್ತಿರಲು ಕಾರಣಗಳೇನು; ಯಾವ ಕಾಲಮಿತಿಯಲ್ಲಿ ಉಳಿದ ಕುಟುಂಬಗಳಿಗೆ ಪರಿಹಾರ ನೀಡಲಾಗುವುದು? (ಸಂಪೂರ್ಣ ಮಾಹಿತಿ ನೀಡುವುದು)	2016-17, 2017-18, 2018-19 ಎಲ್ಲಾ ಪ್ರಕರಣಗಳಲ್ಲಿ ಪರಿಹಾರ ಪಾವತಿಸಲಾಗಿದೆ. 2019-20ನೇ ಸಾಲಿಗೆ ಸಂಬಂಧಿಸಿದಂತೆ ಬೆಳೆ ಹಾನಿ ಪ್ರಕರಣಗಳಲ್ಲಿ 620 ಕುಟುಂಬಗಳಿಗೆ ರೂ.37,95,110.00 ಪರಿಹಾರವನ್ನು ಪಾವತಿಸಲು ಅನುದಾನ ಲಭ್ಯವಿಲ್ಲದ ಕಾರಣ ಬಾಕಿ ಉಳಿದಿರುತ್ತದೆ. ಸರ್ಕಾರದಿಂದ ಅನುದಾನ ಲಭ್ಯವಾದ ಕೂಡಲೇ ಪರಿಹಾರವನ್ನು ಪಾವತಿಸಲಾಗುವುದು. ಮಾನವ-ಗಾಯ ಮತ್ತು ಮಾನವ-ಪ್ರಾಣ ಹಾನಿ ಪ್ರಕರಣಗಳಲ್ಲಿ ದಯಾತ್ಮಕ ಧನ ಪಾವತಿಸಲು ಬಾಕಿ ಇರುವುದಿಲ್ಲ.

ಸಂಖ್ಯೆ: ಅಪಜೀ 77 ಎಫ್‌ಡಬ್ಲ್ಯೂಎಲ್ 2020

21/03/2020

(ಆನಂದ್ ಸಿಂಗ್)

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅನುಬಂಧ-1

ಹಾಸನ ಜಿಲ್ಲೆಯಲ್ಲಿ ಕಳೆದ 3 ವರ್ಷಗಳಲ್ಲಿ ಆನೆ ದಾಳಿಯಿಂದ ಉಂಟಾದ ಬೆಳೆಹಾನಿ, ಮಾನವ-ಗಾಯ ಹಾಗೂ ಮಾನವ ಪ್ರಾಣ ಹಾನಿ ಪ್ರಕರಣಗಳಿಗೆ ಪಾವತಿಸಿದ ದಯಾತ್ಮಕ ಧನದ ವಿವರ ಈ ಕೆಳಕಂಡಂತಿವೆ :

ಕ್ರ. ಸಂ	ವರ್ಷ	ಬೆಳೆಹಾನಿ		ಮಾನವ ಗಾಯ		ಮಾನವ ಪ್ರಾಣ ಹಾನಿ	
		ಪ್ರಕರಣಗಳ ಸಂಖ್ಯೆ	ಪಾವತಿಸಿದ ಮೊಬಲಗು (ರೂ.)	ಪ್ರಕರಣಗಳ ಸಂಖ್ಯೆ	ಪಾವತಿಸಿದ ಮೊಬಲಗು (ರೂ)	ಪ್ರಕರಣಗಳ ಸಂಖ್ಯೆ	ಪಾವತಿಸಿದ ಮೊಬಲಗು (ರೂ)
1.	2016-17	1,350	74,06,710	4	1,44,841	1	5,00,000
2.	2017-18	3,018	1,51,71,939	-	-	5	25,00,000
3.	2018-19	1,593	85,07,971	2	75,615	1	5,00,000
4.	2019-20 (29.02.2020)	1,664	99,73,476	-	-	3	15,00,000
	ಒಟ್ಟು	**7,625**	**4,10,60,096**	**6**	**2,20,456**	**10**	**50,00,000**

ಅನುಬಂಧ-2

ಹಾಸನ ಜಿಲ್ಲೆಯ ಅರಣ್ಯ ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡಾನೆ ದಾಳಿಯಿಂದ ಗಾಯಗೊಂಡ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ

ಕ್ರ. ಸಂ	ವಲಯ	ಘಟನೆ ನಡೆದ ದಿನಾಂಕ	ಗಾಯಗೊಂಡವರ ಹೆಸರು & ವಿಳಾಸ (ಶ್ರೀ/ಶ್ರೀಮತಿ)	ಪಾವತಿಸಿದ ಮೊತ್ತ (ರೂಗಳಲ್ಲಿ)
1.	ಸಕಲೇಶಪುರ	10.10.2016	ಶ್ರೀ ಕೆ. ಆರ್. ಸುಬ್ರಹ್ಮಣ್ಯ, ಬಿನ್ ರುದ್ರೇಗೌಡ, ಕುಮಾರಿಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು.	61,300
2.	ಯಸಳೂರು	30.11.2016	ಶ್ರೀ ಡಿ. ವಿ. ಶಿವಕುಮಾರ, ಬಿನ್ ವೀರಭದ್ರಪ್ಪ, ಗಬ್ಬಳ್ಳಿ ಗ್ರಾಮ, ಯಸಳೂರು ಹೋಬಳಿ, ಸಕಲೇಶಪುರ ತಾಲ್ಲೂಕು.	35,416
3.	ಆಲೂರು	06.02.2017	ಶ್ರೀ ಅಧಿಕನ್ ಜೋಸೆಫ್ ಬಿನ್ ಅಧಿಕನ್, ಬಡಗಿಕೊಪ್ಪಲು ಗ್ರಾಮ, ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.	30,000
4.	ಸಕಲೇಶಪುರ	17.02.2017	ಶ್ರೀಮತಿ ಕಸ್ತೂರಮ್ಮ, ಕೋಂ. ಬಸವರಾಜು, ಕಬ್ಬಿನಗದ್ದೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	18,125
5.	ಸಕಲೇಶಪುರ	27.01.2018	ಶ್ರೀ ಎ. ಬಾಲಕೃಷ್ಣ, ಬಿನ್ ಅಲಗಪ್ಪ, ಕಾಡುಮನೆ ಎಸ್ಟೇಟ್ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು.	17,018
6.	ಸಕಲೇಶಪುರ	04.03.2018	ಶ್ರೀಮತಿ ಫಾತಿಮಾ, ಕೋಂ. ಕೆ. ಎಂ. ಅಬ್ದುಲ್ ಹಮೀಲ್ ಕಾಡುಮನೆ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು.	58,597

ಅನುಬಂಧ-3

ಹಾಸನ ಜಿಲ್ಲೆಯ ಅರಣ್ಯ ವಿಭಾಗದಲ್ಲಿ ಕಳೆದ ಮೂರು ವರ್ಷಗಳಲ್ಲಿ ಕಾಡಾನೆ ದಾಳಿಯಿಂದ ಮಾನವ-ಪ್ರಾಣ ಹಾನಿ ಪ್ರಕರಣಗಳಿಗೆ ಪಾವತಿಸಲಾದ ದಯಾತ್ಮಕ ಧನದ ವಿವರ

ಕ್ರ. ಸಂ.	ವಲಯ	ಮೃತಪಟ್ಟ ದಿನಾಂಕ	ಮೃತರಾದ ವ್ಯಕ್ತಿಯ ಹೆಸರು	ಪಾವತಿಸಿದ ಮೊತ್ತ (ರೂ.ಗಳಲ್ಲಿ)
1.	ಸಕಲೇಶಪುರ	11.03.2017	ಶ್ರೀ ರಮೇಶ ಆಚಾರಿ ಬಿನ್ ಲೇಟ್ ಸುಬ್ಬಾಚಾರಿ, ಕುದರಂಗಿ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	5,00,000
2.	ಆಲೂರು	03.06.2017	ಶ್ರೀ ಅರುಣ ಕೆ.ಆರ್. ಬಿನ್ ರಾಮೇಗೌಡ, ಹೈದೂರು ಗ್ರಾಮ, ಕೆ.ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.	5,00,000
3.	ಸಕಲೇಶಪುರ	06.12.2017	ಶ್ರೀ ಯೋಗೇಶ್. ಹೆಚ್.ಎಸ್. ಬಿನ್ ಸಂಗೇಗೌಡ, ಹೆಗ್ಗೋವೆ ಗ್ರಾಮ, ಕಸಬಾ ಹೋಬಳಿ, ಸಕಲೇಶಪುರ ತಾಲ್ಲೂಕು.	5,00,000
4.	ಆಲೂರು	23.12.2017	ಶ್ರೀ ಶಿವಯ್ಯ ಬಿನ್ ಈರಯ್ಯ, ಅಬ್ಬನ ಕೊಪ್ಪಲು ಗ್ರಾಮ, ಕೆ. ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು.	5,00,000
5.	ಆಲೂರು	14.01.2018	ಶ್ರೀ ಭರತ್ ಬಿನ್ ಶ್ರೀಮತಿ ಭಾನುಮತಿ ಕೊಡಗತವಳ್ಳಿ ಗ್ರಾಮ, ಕೆ. ಹೊಸಕೋಟೆ ಹೋಬಳಿ, ಆಲೂರು ತಾಲ್ಲೂಕು	5,00,000
6.	ಸಕಲೇಶಪುರ	29.03.2018	ಶ್ರೀ ಜೋಸಿ. ಬಿನ್ ಥಾಮಸ್, ಅಚ್ಚನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000
7.	ಸಕಲೇಶಪುರ	04.08.2018	ಶ್ರೀಮತಿ ಪಾಯಮ್ಮ ಕೋಂ ಮುರುಗೇಶ, ಹೊಸಗದ್ದೆ ಗ್ರಾಮ, ಬೆಳಗೋಡು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000
8.	ಸಕಲೇಶಪುರ	22.05.2019	ಶ್ರೀಮತಿ ಲತಾ ಕೋಂ ಲೇಟ್ ಶೇಖರಶೆಟ್ಟಿ, ಕ್ಯಾಮನಹಳ್ಳಿ ಗ್ರಾಮ, ಹಾನುಬಾಳು ಹೋಬಳಿ, ಸಕಲೇಶಪುರ ತಾಲ್ಲೂಕು	5,00,000
9.	ಬೇಲೂರು	19.06.2019	ಶ್ರೀಮತಿ ಪುಷ್ಪ ಕೋಂ ಠಾಕೂರ್ ಸಿಂಗ್, ದೇವರಹಳ್ಳಿ ಗ್ರಾಮ, ಮಾದಿಹಳ್ಳಿ ಹೋಬಳಿ, ಬೇಲೂರು ತಾಲ್ಲೂಕು.	5,00,000
10.	ಹಾಸನ	23.07.2019	ಶ್ರೀ ಎಲ್. ಎಸ್. ಅಣ್ಣೇಗೌಡ, ಬಿನ್ ಸಿಂಗೇಗೌಡ, ಲಿಂಗರಸಹಳ್ಳಿ ಗ್ರಾಮ, ಸಾಲಗಾಮೆ ಹೋಬಳಿ, ಹಾಸನ ತಾಲ್ಲೂಕು	5,00,000